**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.

ಸಂಖ್ಯೆ:ಕಪಂರಾಆ/ಅಭಿವೃದ್ಧಿ/22 /2022 ದಿನಾಂಕ:15.12.2023

ಇವರಿಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೇ,

**ವಿಷಯ:** ಅಸ್ತಿತ್ವದಲ್ಲಿರುವ ಓವರ್ ಗ್ರೌಂಡ್ ಕೇಬಲ್ ಮತ್ತು ಅಂಡರ್ ಗ್ರೌಂಡ್ ಆಪ್ಟಿಕಲ್ ಫೈಬರ್ ಕೇಬಲ್‌ಗಳ, ಕೇಬಲ್ ಡಕ್ಟ್‌ಗಳ ಮತ್ತು ದೂರ ಸಂಪರ್ಕ ಮೂಲಸೌಕರ್ಯ ಟವರ್‌ಗಳ ಸಮೀಕ್ಷೆಯನ್ನು ಕೈಗೊಳ್ಳುವ ಕುರಿತು.

**ಉಲ್ಲೇಖ:** 1. ಸರ್ಕಾರದ ಅಧಿಸೂಚನೆ ಸಂಖ್ಯೆ:RDP/136/GPA/2021 ದಿನಾಂಕ: 02.12.2021
2. ಈ ಕಾರ್ಯಾಲಯದ ಪತ್ರದ ಸಮ ಸಂಖ್ಯೆ ದಿನಾಂಕ:07.06.2022.

----***---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1 ರನ್ವಯ ದೂರಸಂಪರ್ಕ ಮೂಲಸೌಕರ್ಯ ಟವರ್ ಮತ್ತು ಓವರ್ ಗ್ರೌಂಡ್ ಕೇಬಲ್ ಅಥವಾ ಅಂಡರ್ ಗ್ರೌಂಡ್ ಆಪ್ಟಿಕಲ್ ಫೈಬರ್ ಅಳವಡಿಸುವ ಕುರಿತು Karnataka Gram Swaraj and Panchayat Raj (Gram Panchayat) (Telecommunication Infrastructure Tower and Overground Cable or Underground Optical Fibre Cable Infrastructure) ನಿಯಮಗಳನ್ನು ದಿನಾಂಕ:02.12.2021 ರಿಂದ ಜಾರಿಗೊಳಿಸಲಾಗಿದೆ.

ಅದರಂತೆ, ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿ ಪ್ರದೇಶ ಪರಿಮಿತಿಯಲ್ಲಿ ಈಗಾಗಲೇ ಸ್ಥಾಪಿಸಿರುವ ದೂರಸಂಪರ್ಕ ಟವರ್/ಅಳವಡಿಸಿರುವ ಕೇಬಲ್‌ಗಳ ಸಮೀಕ್ಷೆಯನ್ನು ಅಧಿಸೂಚನೆ ದಿನಾಂಕದಿಂದ 60 ದಿನಗಳೊಳಗೆ ಮುಕ್ತಾಯ ಮಾಡಿ, ಗ್ರಾಮ ಪಂಚಾಯಿತಿಯಲ್ಲಿ ನೊಂದಾಯಿಸಿಕೊಳ್ಳದ ಏಜೆನ್ಸಿಗಳಿಗೆ ಅಧಿಸೂಚನೆಯನ್ವಯ ನೋಡಲ್ ಅಧಿಕಾರಿಯಾಗಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅಂತಹ ಏಜೆನ್ಸಿಗಳಿಗೆ ಗ್ರಾಮ ಪಂಚಾಯಿತಿಯಲ್ಲಿ ನೊಂದಾಯಿಸಿಕೊಳ್ಳುವಂತೆ ನಿರ್ದೇಶನ ನೀಡಿ ದಿನಾಂಕ:21.06.2022 ರೊಳಗೆ ಸಮೀಕ್ಷೆಯನ್ನು ಪೂರ್ಣಗೊಳಿಸಲು ಉಲ್ಲೇಖ-2 ರಲ್ಲಿ ತಿಳಿಸಲಾಗಿರುತ್ತದೆ.

ಆದ್ದರಿಂದ, ಉಲ್ಲೇಖ-1 & 2 ರನ್ವಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ದೂರಸಂಪರ್ಕ ಟವರ್/ಅಳವಡಿಸಿರುವ ಕೇಬಲ್‌ಗಳ ಸಮೀಕ್ಷೆಯನ್ನು ದಿನಾಂಕ:29.12.2023 ರೊಳಗೆ ಪೂರ್ಣಗೊಳಿಸಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಕೇಬಲ್‌ಗಳು ಅಥವಾ ಕೇಬಲ್ ಡಕ್ಟ್‌ಗಳನ್ನು ಅಳವಡಿಸಿರುವ ಮತ್ತು ದೂರ ಸಂಪರ್ಕ ಮೂಲಸೌಕರ್ಯ ಟವರ್‌ಗಳನ್ನು ಸ್ಥಾಪಿಸಿರುವ ಏಜೆನ್ಸಿಗಳಿಗೆ ಗ್ರಾಮ ಪಂಚಾಯಿತಿಯಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಳ್ಳುವಂತೆ ಹಾಗೂ ನಿಯಮಗಳನ್ವಯ ಫೀಜುಗಳು/ತೆರಿಗೆಗಳನ್ನು ಪಾವತಿಸುವಂತೆ ನಿರ್ದೇಶನ/ನೋಟೀಸ್ ಗಳನ್ನು ನೀಡುವ ಮೂಲಕ ಪ್ರತಿಶತ ಪ್ರಗತಿ ಸಾಧಿಸಲು ನೋಡೆಲ್ ಅಧಿಕಾರಿಗಳು ಆಗಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸದರಿ ಉದ್ದೇಶದ ಯಾವುದೇ ಏಜೆನ್ಸಿ ನೊಂದಾಣಿಯಿಂದ ಹೊರಗುಳಿಯದಿರುವ ಬಗ್ಗೆ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳು ಧೃಢೀಕರಿಸಿಕೊಳ್ಳಲು ಅಗತ್ಯ ನಿರ್ದೇಶನ ನೀಡಲು ತಿಳಿಸಿದೆ.

ತಮ್ಮ ವಿಶ್ವಾಸಿ

ಆಯುಕ್ತರು,
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

ಪ್ರತಿಯನ್ನು,

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್), ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ರವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು (ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ತಾಲ್ಲೂಕು ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
4. ಕಛೇರಿ ಪ್ರತಿ.